# ಅಮಿ ಜಾಕ್ಸನ್: ಖುಲಾಯಿಸಿದ ಅದೃಷ್ಟ



ಶಂಕರ್ ನಿರ್ದೇಶನದ ತಮಿಳು ಚಿತ್ರ 'ಐ' ಮೂಲಕ ಗಮನ ಸೆಳೆದಿರುವ ನಟಿ ಅಮಿ ಜಾಕ್ಸನ್ ಅದೃಷ್ಟ ಖುಲಾಯಿಸಿದೆ. ಪ್ರತೀಕ್ ಬಬ್ಬರ್ ನಾಯಕನಾಗಿದ್ದ 'ಏಕ್ ದೀವಾನಾ ಥಾ' ಚಿತ್ರದಿಂದ ಬಾಲಿವುಡ್‌ಗೆ ಅಡಿಯಿಟ್ಟ ಅವಳಿಗೆ ಮೊದಲ ಚಿತ್ರ ಯಶಸ್ಸನ್ನೇನೂ ತಂದುಕೊಟ್ಟಿರಲಿಲ್ಲ. ಈಗ ಅವಳ ದೆಸೆ ಬದಲಾಗುತ್ತಿದೆ ಎನ್ನುತ್ತಿದ್ದಾರೆ ಬಿ–ಟೌನ್ ಪಂಡಿತರು. ಅಕ್ಷಯ್ ಕುಮಾರ್ ಅಭಿನಯದ ಪ್ರಭುದೇವ ನಿರ್ದೇಶನದ 'ಸಿಂಗ್ ಈಸ್ ಬ್ಲಿಂಗ್' ಚಿತ್ರಕ್ಕೆ ನಾಯಕಿಯಾಗುವ ಅವಕಾಶ ಅಚಾನಕ್ಕಾಗಿ ದೊರೆತಿದೆ.

ಕೃತಿ ಸನೊನ್ ಈ ಚಿತ್ರಕ್ಕೆ ಮೊದಲು ಆಯ್ಕೆಯಾಗಿದ್ದರು. ಫೆಬ್ರುವರಿಯಿಂದ ಚಿತ್ರೀಕರಣ ಪ್ರಾರಂಭವಾಗಬೇಕಿತ್ತು. ಆದರೆ ಅಕ್ಷಯ್ ಕುಮಾರ್ 'ಏರ್‌ಲಿಫ್ಟ್' ಚಿತ್ರವನ್ನು ಮೊದಲು ಮುಗಿಸಬೇಕಿರುವುದರಿಂದ '...ಬ್ಲಿಂಗ್' ಚಿತ್ರೀಕರಣವನ್ನು ಮುಂದೂಡಬೇಕಾಗಿದೆ. ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಈ ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ. ಸಿನಿಮಾ ಮುಂದಕ್ಕೆ ಹೋಗಿದ್ದರಿಂದ ಕೃತಿ ನೀಡಿದ್ದ ಸಮಯವೂ ಮುಗಿದುಹೋಗಿದೆ. ಮಾರ್ಚ್ ನಂತರದದಲ್ಲಿ ಕೃತಿ ರೋಹಿತ್ ಶೆಟ್ಟಿ ನಿರ್ದೇಶನದ ಚಿತ್ರದಲ್ಲಿ ತೊಡಗಿಕೊಳ್ಳಲಿದ್ದಾರೆ. ವರುಣ್ ಧವನ್ ಈ ಚಿತ್ರದ ನಾಯಕ. ಹೀಗಾಗಿಯೇ ಅಮಿಗೆ ಕೃತಿಯಿಂದ ತೆರವಾದ ಈ ಅವಕಾಶ ಒಲಿದಿರುವುದು. ಬ್ರಿಟನ್‌ನ ಈ ರೂಪದರ್ಶಿಗೆ ವರದಾನದಂತೆ ಸಿಕ್ಕಿದೆ 'ಸಿಂಗ್ ಈಸ್ ಬ್ಲಿಂಗ್'. 'ಐ' ಚಿತ್ರದ ಅಭಿನಯಕ್ಕೆ ಮೆಚ್ಚುಗೆ ಗಳಿಸಿದ್ದ ಅಮಿ ಜಾಕ್ಸನ್ ಈ ಅದೃಷ್ಟದ ಅವಕಾಶವನ್ನು ಹೇಗೆ ಬಳಸಿಕೊಳ್ಳುತ್ತಾಳೋ ನೋಡಬೇಕು.



# ಗೌಹರ್ ಹೊಸ ಷೋ!

ರೂಪದರ್ಶಿ–ನಿರೂಪಕಿ ಗೌಹರ್ ಖಾನ್ ಹೆಚ್ಚು ಸುದ್ದಿಯಾಗಿದ್ದು ರಿಯಾಲಿಟಿ ಷೋ ಒಂದರಲ್ಲಿ ತುಂಡುಡುಗೆ ಧರಿಸಿದ್ದಕ್ಕೆ ಕಪಾಳಮೋಕ್ಷಕ್ಕೊಳಗಾದ ಪ್ರಕರಣದಿಂದ. ಅದಕ್ಕೂ ಮುನ್ನ 'ಬಿಗ್‌ಬಾಸ್' ರಿಯಾಲಿಟಿ ಷೋನಲ್ಲಿ ಗೆಲ್ಲುವ ಮೂಲಕ ಗೌಹರ್ ಸುದ್ದಿಯಾಗಿದ್ದಳು. ಕೆಲವು ಹಾಡುಗಳಲ್ಲಿ ಕಾಣಿಸಿಕೊಳ್ಳುವುದರ ಮೂಲಕವೂ ಅವಳು ಪರಿಚಿತಳಾದವಳು. ಕಪಾಳಮೋಕ್ಷದ ಪ್ರಕರಣದಲ್ಲಿ ಒಂದು ರೀತಿ ಗೌಹರ್ ಜನರ ಬೆಂಬಲವನ್ನೂ ಪಡೆದಳು.

ಈಗ ನಟಿಯಾಗಿ ಬಾಲಿವುಡ್‌ಗೆ ಪಾದಾರ್ಪಣೆ ಮಾಡಲು ಸಿದ್ಧತೆ ನಡೆಸಿದ್ದಾಳೆ. ರಾಜೀವ್ ಝುವೇರಿ ನಿರ್ದೇಶನದ 'ಫೀವರ್'ನಲ್ಲಿ ಅವಳು ಬಣ್ಣ ಹಚ್ಚುತ್ತಿದ್ದಾಳೆ. ಅದರ ಜತೆಗೆ ವೃತ್ತಿಯಾಗಿ ತೆಗೆದುಕೊಂಡಿರುವ ನೃತ್ಯದಲ್ಲಿಯೂ ತಮ್ಮ ಸುತ್ತ ಕಟ್ಟುಪಾಡುಗಳನ್ನು ವಿಧಿಸಿಕೊಳ್ಳಲು ಗೌಹರ್ ನಿಶ್ಚಯಿಸಿಕೊಂಡಿದ್ದಾಳೆ. 'ಝಲಕ್ ದಿಕ್ಲಾ ಜಾ' ನೃತ್ಯ ರಿಯಾಲಿಟಿ ಷೋದಲ್ಲಿಯೂ ಮಿಂಚಿದ್ದ ಅವಳು, ಐಟಂ ನಂಬರ್‌ಗಳಲ್ಲಿ ಕಾಣಿಸಿಕೊಳ್ಳಲು ತೊಂದರೆ ಇಲ್ಲ ಎನ್ನುತ್ತಾಳೆ. ಆದರೆ ಕೆಲವೇ ಆಯ್ದ ಆಹ್ವಾನಗಳನ್ನು ಒಪ್ಪಿಕೊಳ್ಳಲು ತೀರ್ಮಾನಿಸಿದ್ದಾಳೆ.

'ಈಗ ನಾನು ಆಯ್ದ ಅವಕಾಶಗಳನ್ನು ಮಾತ್ರ ಮಾಡುತ್ತಿದ್ದೇನೆ. ಹಾಡಿನಲ್ಲಿ ಮಾತ್ರ ಕಾಣಿಸಿಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಜನರು ನನ್ನನ್ನು ನೃತ್ಯಕ್ಕಾಗಿ ಇಷ್ಟಪಡುತ್ತಾರೆ. ಈ ಕ್ಷೇತ್ರದಲ್ಲಿ ಉತ್ತಮ ಅವಕಾಶ ಬರುತ್ತದೆ' ಎಂಬ ಭರವಸೆ ವ್ಯಕ್ತಪಡಿಸಿದ್ದಾಳೆ. 'ಆಸಕ್ತಿದಾಯಕ ಐಟಂ ನಂಬರ್‌ನಲ್ಲಿ ಕುಣಿಯುವ ಅವಕಾಶ ಸಿಕ್ಕರೆ ಖಂಡಿತಾ ಅದನ್ನು ಬಳಸಿಕೊಳ್ಳುತ್ತೇನೆ' ಎಂದಿದ್ದಾಳೆ ಗೌಹರ್ ಖಾನ್.

■ ಅಮಿ